APC-B.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2018-19ನೇ ಸಾಲಿನಲ್ಲಿ ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ ಸಂಸ್ಥೆಗೆ ಹೆಚ್ಚುವರಿಯಾಗಿ ಒದಗಿಸಿಕೊಳ್ಳಲಾದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. 2018-19ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-28
2. ಸರ್ಕಾರದ ಆದೇಶ ಸಂಖ್ಯೆ: ಕೃಇ 82 ಕೃಕೈಉ 2018, ದಿ:01.01.2019.
3. ವ್ಯವಸ್ಥಾಪಕ ನಿರ್ದೇಶಕರು, ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ:ವ್ಯ.ನಿ/ಕಅಂ.ಸೂ.ನಿ.ನಿ/2018-19, ದಿ:26.12.2018.
4. ಸರ್ಕಾರದ ಪತ್ರ ಸಂಖ್ಯೆ:ಕೃಇ 5299 ಕೃಯೋಎ 2018, ದಿ:01.02.2019.
5. ಸರ್ಕಾರದ ಪತ್ರ ಸಂಖ್ಯೆ: ಕೃಇ 85 ಕೃಕೈಉ 2018, ದಿ:28.08.2018.
6. 2018-19ನೇ ಸಾಲಿನ ಆಯವ್ಯಯ ಪೂರಕ ಅಂದಾಜು-2 & ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 01 ಬಿಎಸ್‌ಜಿ 2019, ದಿನಾಂಕ: 01.03.2019.

*****

## ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಂತೆ ರಾಜ್ಯ ಸರ್ಕಾರವು ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮವನ್ನು ಅಭಿವೃದ್ಧಿ ಪಡಿಸಲು 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಈ ಕೆಳಕಂಡಂತೆ ಘೋಷಿಸಿರುತ್ತದೆ.

**"ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ ಸಂಸ್ಥೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಹಾಗೂ ಮೂಲಭೂತ ಸೌಕರ್ಯಗಳಿಗಾಗಿ ರೂ.2.00 ಕೋಟಿಗಳನ್ನು ಒದಗಿಸಲಾಗುವುದು"**

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಆದೇಶದಲ್ಲಿ 2018-19ನೇ ಸಾಲಿನ ಜುಲೈ 2018ರ ಆಯವ್ಯಯ ಭಾಷಣದ ಅನ್ವಯ ರಾಜ್ಯದಲ್ಲಿ "ಕರ್ನಾಟಕ ಅಂತರಗಂಗ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ ಸಂಸ್ಥೆಯ ನೋಂದಣಿ ಪ್ರಕ್ರಿಯೆ ಹಾಗೂ ಸಂಸ್ಥೆಗೆ ಅವಶ್ಯವಾದ ಮೂಲಭೂತ ಸೌಕರ್ಯಗಳು ಹಾಗೂ ಅವಶ್ಯಕ ವೆಚ್ಚ ಭರಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ. ಸದರಿ ಸಂಸ್ಥೆಯ ಆಡಳಿತಾತ್ಮಕ ವೆಚ್ಚಗಳನ್ನು 2018-19ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 4401-00-108-0-04(059) ರಡಿ ಒದಗಿಸಿರುವ ಅನುದಾನದಿಂದ ಭರಿಸಲು ಸಹ ಅನುಮತಿಯನ್ನು ನೀಡಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ(3) ರಲ್ಲಿನ ಪತ್ರದಲ್ಲಿ ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ವೇತನ, ಇತರೆ ಭತ್ಯೆಗಳು ಹಾಗೂ ಸಂಸ್ಥೆಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಅನುದಾನವನ್ನು ಒದಗಿಸುವಂತೆ ಕೋರಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ:4 ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ ಇದರ ಮೂಲ ಬಂಡವಾಳವಾದ ರೂ.5.00 ಲಕ್ಷಗಳನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಲೆಕ್ಕ ಶೀರ್ಷಿಕೆ ರಲ್ಲಿ ಲಭ್ಯವಿರುವ ಅನುದಾನದಿಂದ ಸಂದಾಯ ಮಾಡಲು ತಿಳಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ:5 ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಕೃಷಿ ಇಲಾಖೆಯ ಅಂಗ ಸಂಸ್ಥೆಯಾದ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ ಸಂಸ್ಥೆಯಿಂದ ಖರ್ಚು ವೆಚ್ಚಗಳನ್ನು ಭರಿಸಿ ತದನಂತರ ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತದಿಂದ ಸದರಿ ವೆಚ್ಚದ ಹಣ ಹೊಂದಿಸಿ ಪುನಃ ಕೆಪೆಕ್ ಸಂಸ್ಥೆಗೆ ಮರುಪಾವತಿ ಮಾಡಲು ತಿಳಿಸಲಾಗಿದೆ

ಮೇಲೆ ಕ್ರಮ ಸಂಖ್ಯೆ(6) ರಲ್ಲಿ ಓದಲಾದ 2018-19ನೇ ಸಾಲಿನ ಪೂರಕ ಅಂದಾಜು-2 ರಲ್ಲಿ ಕರ್ನಾಟಕ ಅಂತರಗಂಗ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ ಸಂಸ್ಥೆ ಇಲ್ಲಿಗೆ ವ್ಯವಸ್ಥಾಪಕ ನಿರ್ದೇಶಕ ಅಧಿಕಾರಿಯನ್ನು ನೇಮಿಸಿರುವ ದಿನಾಂಕದಿಂದ ವೇತನವನ್ನು ಪಾವತಿಸಲು ಅಂದರೆ 2018-19ನೇ ಸಾಲಿನ ಜೂನ್-2018 ರಿಂದ ಫೆಬ್ರವರಿ 2019 ರವರೆಗೆ 9 ತಿಂಗಳ ವೇತನಕ್ಕೆ ರೂ.16.96 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2401-00-001-0-01-ಉ.ಶೀ:101 ರಡಿ ಸೃಜಿಸಿ ಒದಗಿಸಲು ಹಾಗೂ ಕಂಪನಿಯ ರಿಜಿಸ್ಟ್ರೇಷನ್ ವೆಚ್ಚ ಹಾಗು ಕಚೇರಿ ವೆಚ್ಚಗಳಿಗೆ ಇದೇ ಲೆಕ್ಕ ಶೀರ್ಷಿಕೆಯ ಉಪ ಶೀರ್ಷಿಕೆ:103 ರಡಿ ರೂ.13.80 ಲಕ್ಷಗಳನ್ನು ಒಟ್ಟು ರೂ.30.76 ಲಕ್ಷಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗಿರುತ್ತದೆ.

ಪ್ರಸ್ತುತ ಆಯವ್ಯಯ ಲೆಕ್ಕ ಶೀರ್ಷಿಕೆ 2401-00-001-01 ರ ಉಪ ಶೀರ್ಷಿಕೆ 101 ಮತ್ತು 103 ರಡಿ ಪಡೆಯಲಾಗಿರುವ ಹೆಚ್ಚುವರಿ ಅನುದಾನವನ್ನು ಕೃಷಿ ಇಲಾಖೆಯ ಮುಖಾಂತರ ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲು ಅನುವಾಗುವಂತೆ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 82 ಕೃಕೈಉ 2018, ಬೆಂಗಳೂರು, ದಿನಾಂಕ:08-03-2019**

2018-19ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2401-00-001-01 ರಡಿ ಹೆಚ್ಚುವರಿಯಾಗಿ ಒದಗಿಸಿರುವ ಅನುದಾನದಲ್ಲಿ ಕರ್ನಾಟಕ ಅಂತರಗಂಗ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅಧಿಕಾರಿಯನ್ನು ನೇಮಿಸಿರುವ ದಿನಾಂಕದಿಂದ ವೇತನವನ್ನು ಪಾವತಿಸಲು ಅಂದರೆ 2018-19ನೇ ಸಾಲಿನ ಜೂನ್-2018 ರಿಂದ ಫೆಬ್ರವರಿ 2019 ರವರೆಗೆ 9 ತಿಂಗಳ ವೇತನಕ್ಕೆ ಉಪ ಶೀರ್ಷಿಕೆ:101 ರಡಿ ರೂ.16.96 ಲಕ್ಷಗಳು ಹಾಗೂ ಕಂಪನಿಯ ರಿಜಿಸ್ಟ್ರೇಷನ್ ವೆಚ್ಚ ಹಾಗು ಕಚೇರಿ ವೆಚ್ಚಗಳಿಗೆ ಉಪ ಶೀರ್ಷಿಕೆ:103 ರಡಿ ರೂ.13.80 ಲಕ್ಷಗಳು ಸೇರಿದಂತೆ **ಒಟ್ಟು ರೂ.30.76 ಲಕ್ಷಗಳನ್ನು** (ಮೂವತ್ತು ಲಕ್ಷದ ಎಪ್ಪತ್ತಾರು ಸಾವಿರ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲಾಗಿದೆ.

ಕೃಷಿ ಇಲಾಖೆಯು ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ ಸಂಸ್ಥೆಯು ಸಲ್ಲಿಸುವ Grant-in –aid ಬಿಲ್ಲುಗಳಿಗೆ CTS-13 ರನ್ವಯ ಮೇಲು ಸಹಿ ಮಾಡುವ ಅಧಿಕಾರವನ್ನು ಕೃಷಿ ನಿರ್ದೇಶಕರ ಪರವಾಗಿ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರಿಗೆ ಪ್ರತ್ಯಾಯೋಜಿಸಲಾಗಿದೆ.

- -

ನಿಗಮವು ಈಗಾಗಲೇ ನೋಂದಣಿಗಾಗಿ ಕೆಪೆಕ್ ಸಂಸ್ಥೆಯಿಂದ ಪಡೆದು ಭರಿಸಿರುವ ಮೊತ್ತವನ್ನು ಪ್ರಸ್ತುತ ಬಿಡುಗಡೆ ಮಾಡಲಾಗಿರುವ ಅನುದಾನದಿಂದ ಮರುಪಾವತಿ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 85 ವೆಚ್ಚ-4/2019 ದಿ: 15.02.2019 ರಲ್ಲಿ ನೀಡಿರುವ ಸಹಮತಿಯನ್ವಯ ಹಾಗು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ/02/ಟಿಎಫ್‌ಪಿ/2018, ದಿ:03.04.2018ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

B S Nagarathnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

ಇವರಿಗೆ,

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್ ಎ) ಕರ್ನಾಟಕ ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2) ಪ್ರಧಾನ ಮಹಾಲೇಖಪಾಲರು (ಎ & ಇ ) ಕರ್ನಾಟಕ ಪಾರ್ಕ್‌ಹೌಸ್ ರಸ್ತೆ , ಬೆಂಗಳೂರು-01.
3) ಕೃಷಿ ಆಯುಕ್ತರು / ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
4) ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು
5) ವ್ಯವಸ್ಥಾಪಕ ನಿರ್ದೇಶಕರು, ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-4)/(ಎಫ್‌ಆರ್ ಮತ್ತು ಬಿಸಿಸಿ) ವಿಧಾನ ಸೌಧ, ಬೆಂಗಳೂರು
7) ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು

.....................................

APC-B

# ಕರ್ನಾಟಕ ಸರ್ಕಾರ

ಕೃಇ 09 ಕೃಉಇ 2019 (ಭಾಗ-3)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 08.03.2019

## ಸುತ್ತೋಲೆ

**ವಿಷಯ:-** ಪ್ರಧಾನ ಮಂತ್ರಿ ಕಿಸಾನ್ ಯೋಜನೆಯನ್ನು ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ FRUITS ತಂತ್ರಾಂಶದಡಿ ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ:** ನಿರ್ದೇಶಕರು, ಇಡಿಸಿಎಸ್ ರವರ ಪತ್ರ ಸಂಖ್ಯೆ: ಇಡಿಸಿಎಸ್ 05 ಇಡಿಎಂ 2017.
ದಿನಾಂಕ: 21.02.2019.

******

ಭಾರತ ಸರ್ಕಾರವು ಪ್ರಧಾನ ಮಂತ್ರಿ ಕಿಸಾನ್ (Pradhan Mantri KIsan SAmman Nidhi PM-KISAN) ಯೋಜನೆಯನ್ನು ಪ್ರಾರಂಭಿಸಿದ್ದು, ಯೋಜನೆಯಡಿಯಲ್ಲಿ 2 ಹೆಕ್ಟೇರ್‌ಗಿಂತ ಕಡಿಮೆ ಭೂ ಒಡೆತನ ಹೊಂದಿರುವ ಪ್ರತಿ ಸಣ್ಣ ರೈತ ಕುಟುಂಬವು ಒಂದು ವರ್ಷಕ್ಕೆ ರೂ. 6000/- ಗಳನ್ನು ಪಡೆಯಬಹುದಾಗಿರುತ್ತದೆ.

2018-19ನೇ ಸಾಲಿನಿಂದ ಪ್ರಧಾನ ಮಂತ್ರಿ ಕಿಸಾನ್ (PRADHAN MANTRI KISAN SAMMAN NIDHI PM-KISAN) ಯೋಜನೆಯಡಿ ರೈತ ಫಲಾನುಭವಿಗಳ ಮಾಹಿತಿಯನ್ನು ವಿದ್ಯುನ್ಮಾನ ಮಾದರಿಯಲ್ಲಿ ಪಡೆದುಕೊಂಡು, ಸದರಿ ದತ್ತಾಂಶವನ್ನು FRUITS ತಂತ್ರಾಂಶದಲ್ಲಿ ನಮೂದಿಸಲು ಸಾಮಾನ್ಯ ಸೇವಾ ಕೇಂದ್ರಗಳಲ್ಲಿ (ಸಿ.ಎಸ್.ಸಿ) ಪ್ರತಿ ಅರ್ಜಿಗೆ ರೂ. 5.00ರಂತೆ ವಿದ್ಯುನ್ಮಾನ ವ್ಯವಸ್ಥೆಯಡಿಯಲ್ಲಿ ಇಡಿಸಿಎಸ್ ಖಾತೆಗೆ ವರ್ಗಾಯಿಸಲು PM-KISAN ಯೋಜನೆಯಡಿ ಪಡೆಯಲಾಗುವ ಆಡಳಿತಾತ್ಮಕ ಅನುದಾನದಲ್ಲಿ ಅಗತ್ಯ ವೆಚ್ಚಗಳನ್ನು ಭರಿಸಿ ಉಳಿಕೆ ಅನುದಾನದಿಂದ ಭರಿಸುವಂತೆ ತಿಳಿಸಲಾಗಿದೆ.

ಉಳಿದ ಎಲ್ಲಾ ಷರತ್ತುಗಳು ಮತ್ತು ನಿಭಂದನೆಗಳು ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಮಾರ್ಗಸೂಚಿಯಂತೆ ಇರುತ್ತದೆ.

B S Nagarathnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).
08/03/19

**ಇವರಿಗೆ:**

1. ಕೃಷಿ ಆಯುಕ್ತರು./ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
2. ಆಯುಕ್ತರು, ತೋಟಗಾರಿಕೆ ಇಲಾಖೆ, ಬೆಂಗಳೂರು.
3. ಆಯುಕ್ತರು, ರೇಷ್ಮೆ ಇಲಾಖೆ ಬೆಂಗಳೂರು.
4. ಡೆಪ್ಯುಟಿ ಡೈರೆಕ್ಟರ್ ಜನರಲ್ & ಸ್ಟೇಟ್ ಇನ್ಫರ್ಮ್ಯಾಟಿಕ್ಸ್ ಆಫೀಸರ್, ಬೆಂಗಳೂರು.
5. ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ ಸದಸ್ಯರು ಬೆಂಗಳೂರು. (ಕೃಷಿ ಆಯುಕ್ತರ ಮುಖಾಂತರ)
6. ವ್ಯವಸ್ಥಾಪಕ ನಿರ್ದೇಶಕರು, ಅಪೆಕ್ಸ್ ಬ್ಯಾಂಕ್, ಬೆಂಗಳೂರು.
7. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು. } (ಕೃಷಿ ಆಯುಕ್ತರ ಮುಖಾಂತರ)
8. ಎಲ್ಲಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರು. }
9. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
10. ನಿರ್ದೇಶಕರು, ಇಡಿಸಿಎಸ್, ಇ-ಆಡಳಿತ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

11. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
12. ನಿರ್ದೇಶಕರು, TNMC, ಖನಿಜ ಭವನ ಬೆಂಗಳೂರು.
13. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ– 4&5), ಆರ್ಥಿಕ ಇಲಾಖೆ, ಬೆಂಗಳೂರು
14. ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
15. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

<u>ಮಾಹಿತಿಗಾಗಿ:–</u>

16. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
17. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
18. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ–ಆಡಳಿತ) ಬೆಂಗಳೂರು.
19. ಸರ್ಕಾರದ ಅಪರ ಮುಖ್ಯ. ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ಬೆಂಗಳೂರು.
20. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ. ಬೆಂಗಳೂರು.
21. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ. ಕಂದಾಯ ಇಲಾಖೆ, ಬೆಂಗಳೂರು
22. ಸರ್ಕಾರದ ಪ್ರಧಾನ ಕಾರ್ಯದರ್ಶಿ. ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ. ಬೆಂಗಳೂರು.
23. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ. ಬೆಂಗಳೂರು.
24. ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬೆಂಗಳೂರು.
25. ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.